


ಅವರ ಕುಟುಂಬದ ಸದಸ್ಯರುಗಳಿಗೆ ಅಗತ್ಯ ಬೆಂಬಲವನ್ನು ನೀಡುವುದರ ಮೂಲಕ ರೋಗಿಗಳ ಸಾಮಾಜಿಕ ದುರ್ಬಲತೆಯನ್ನು ಕಡಿಮೆಗೊಳಿಸುವುದು.




ಕ್ಷಯ ಪರೀಕ್ಷಿಸುವ ಸಾಧನ

## ಕ್ಷಯರೋಗ ನಿರ್ಮೂಲನೆಗಿರುವ ಸವಾಲುಗಳೇನು?

- ಕ್ಷಯರೋಗ ನಿರ್ಣಯ ಮತ್ತು ಚಿಕಿತ್ಸಾ ಸೌಲಭ್ಯಗಳ ಲಭ್ಯತೆ ಬಗ್ಗೆ ಸಮುದಾಯದಲ್ಲಿ ಸಾಕಷ್ಟು ಅರಿವು ಇಲ್ಲದಿರುವುದು (ರೋಗಿಗಳ ಬಹು ಸಮಾಲೋಚನೆಗಳಿಂದ ಹೆಚ್ಚಾದ ವಿಳಂಬ)
- ಅಪೌಷ್ಟಿಕತೆಯಿಂದ ಬಳಲುತ್ತಿರುವ ಜನರಲ್ಲಿ ರೋಗ ನಿರೋಧಕ ಶಕ್ತಿ ದುರ್ಬಲಗೊಂಡು ಕ್ಷಯರೋಗವನ್ನು ಪುನಃ ಸಕ್ರಿಯಗೊಳಿಸಲು ಕಾರಣವಾಗುತ್ತದೆ.
- ಮಧುಮೇಹ, ಒಳಾಂಗಣ ವಾಯುಮಾಲಿನ್ಯ, ಧೂಮಪಾನ, ಹಿಂದಿನ ಅಸಮರ್ಪಕ ಚಿಕಿತ್ಸೆ ಪಡೆದ ಕ್ಷಯರೋಗಿಗಳು ಮತ್ತು ದಟ್ಟವಾಗಿ ಬೆಳೆಯುತ್ತಿರುವ ನಗರ ಪ್ರದೇಶಗಳಿಂದ ಕ್ಷಯರೋಗ ಹರಡುವಿಕೆಯನ್ನು ತಡೆಗಟ್ಟಲು ಅಡ್ಡಿಯಾಗುತ್ತಿರುವುದು.
- ಪತ್ತೆಯಾಗದ ಸಾಂಕ್ರಾಮಿಕ ಕ್ಷಯರೋಗ ಪ್ರಕರಣಗಳಿಂದ, ಕ್ಷಯರೋಗಿಗಳು ತಮ್ಮ ಕುಟುಂಬ ಮತ್ತು ಸಮುದಾಯಕ್ಕೆ ರೋಗ ಹರಡುತ್ತಿರುವುದು.
- ಚಿಕಿತ್ಸೆಯಲ್ಲಿರುವ ರೋಗಿಗಳನ್ನು ವಿಶೇಷವಾಗಿ ವಲಸೆ ಸಮುದಾಯದವರು ಹಾಗೂ ಮದ್ಯಪಾನ ಮಾಡುವವರು ಕ್ಷಯರೋಗ ನಿರ್ಮೂಲನೆ ಕಾರ್ಯಕ್ರಮದಲ್ಲಿ ಸವಾಲಾಗಿ ಉಳಿದಿದ್ದಾರೆ.
- ಮಕ್ಕಳಲ್ಲಿ ಸೂಕ್ತವಾದ ಮಾದರಿಗಳನ್ನು ಸಂಗ್ರಹಿಸುವುದು ಮತ್ತು ಶ್ವಾಸಕೋಶೇತರ ಕ್ಷಯರೋಗ ಮಾದರಿಗಳನ್ನು ಜಿಲ್ಲಾ ಮಟ್ಟದಲ್ಲಿ ಸಂಗ್ರಹಿಸುವ ಸಾಮರ್ಥ್ಯದ ಕೊರತೆಯಿದೆ.